**ಪ್ರಧಾನ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ**

**ಸಿಸಿ ನಂ. 3231/20211**

| | | | |
|---|---|---|---|
| **ಹೆಸರು** | : | **ವಿಲಾಸಕುಮಾರ** | ಚಾ.ಸಾ. 3 |
| **ತಂದೆಯ ಹೆಸರು** | : | **ಮಾರುತಿ** | ಪ್ರಾ.ಸಾ. 4 |
| **ವಯಸ್ಸು** | : | **40 ವರ್ಷ** | ದಿನಾಂಕಃ 13-05-2025 |
| **ಉದ್ಯೋಗ** | : | **ಒಕ್ಕಲುತನ** | |
| **ವಾಸಸ್ಥಳ** | : | **ದೇಗಲಮಡಿ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**

ಚಾಸಾ-1 ಮತ್ತು 14 ರವರು ನನಗೆ ಗೊತ್ತು. ಚಾಸಾ- 2 ರವರು ನನಗೆ ಗೊತ್ತಿಲ್ಲ.

ಈಗ ನೋಡುತ್ತಿರುವ ನಿಪಿ-6 ರಲ್ಲಿ ನನ್ನ ಸಹಿ ಇದೆ. ನನ್ನ ಸಹಿಯನ್ನು ನಿಪಿ-6(ಬಿ) ಎಂದು ಗುರುತಿಸಲಾಯಿತು.

ಈಗ ನೋಡುತ್ತಿರುವ ನಿಪಿ-2 ಮತ್ತು 3 ರ ಭಾವಚಿತ್ರಗಳಲ್ಲಿ ನಾನು ಇದ್ದೇನೆ. ಅದರಲ್ಲಿ ನನ್ನ ಜೊತೆ ಚಾಸಾ-1 ಮತ್ತು 14 ರವರು ಇದ್ದಾರೆ.

ಈಗ 4 ರಿಂದ 5 ವರ್ಷಗಳ ಹಿಂದೆ ಮಧ್ಯಾಹ್ನ ಸಮಯಕ್ಕೆ ನಾನು ಚಿಂಚೋಳಿಯಿಂದ ಚಂದಾಪುರಕ್ಕೆ ಹೋಗುವಾಗ ಜೂನಿಯರ ಕಾಲೇಜ್ ಮುಂದೆ ಚಾಸಾ-1 ಮತ್ತು 14 ರವರು ನಿಂತಿದ್ದರು. ಆಗ ಪೋಲಿಸರು ನಿಲ್ಲಲು ಎಂದು ಹೇಳಿ ಭಾವಚಿತ್ರ ಪಡೆದ್ದಾರೆ ಮತ್ತು ಸಹಿ ಮಾಡು ಎಂದು ಹೇಳಿದಕ್ಕೆ ನಿಪಿ-6 ರಲ್ಲಿ ಸಹಿ ಮಾಡಿದ್ದೇನೆ. ಪೋಲಿಸರು ತಾವು ಗಸ್ತು ಕಾರ್ಯಕ್ಕೆ ಬಂದಿದ್ದಾರೆ ಎಂದು ಹೇಳಿ ನನ್ನ ಸಹಿ ಪಡೆದಿದ್ದಾರೆ. ನಿಪಿ-6 ನ್ನು ನಾನು ಓದಿಲ್ಲ ಮತ್ತು ಅದನ್ನು ನನಗೆ ಓದಿ ಹೇಳಿಲ್ಲ.

(ಈ ಹಂತದಲ್ಲಿ ತನಿಖಾಧಿಕಾರಿಯವರ ಮುಂದೆ ಸಲ್ಲಿಸಿರುವ ಪಂಚನಾಮೆಗೆ ಈ ಸಾಕ್ಷಿ ಭಾಗಶಃ ಪ್ರತಿಕೂಲ ಸಾಕ್ಷ್ಯ ನುಡಿಯುತ್ತಿದ್ದು, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೊಡುವಂತೆ ಸ.ಸ.ಅ.ರವರು ಅನುಮತಿ ಕೋರುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**

ದಿನಾಂಕಃ 25-08-2020 ರಂದು ಚಾಸಾ-1 ರವರು ತೋರಿಸಿದಂತೆ ಸ್ಥಳದಲ್ಲಿ ಜಗಳವಾದ ಕಾರಣ ಪೋಲಿಸರು ಪಂಚನಾಮೆಯನ್ನು ಜರುಗಿಸಿದ್ದಾರೆ ಎಂದು ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಪಂಚನಾಮೆ ಸಂಗತಿಗಳನ್ನು ಪೋಲಿಸರು ನನಗೆ ಓದಿ ಹೇಳಿದ್ದಾರೆ ಎಂದರೆ ಸರಿಯಲ್ಲ. ಎಲ್ಲಾ ಗೊತ್ತಿದ್ದರೂ

ಆರೋಪಿಯ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀ BS ವಕೀಲರಿಂದಃ ಇಲ್ಲ**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**
**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಪ್ರ.ದ.ನ್ಯಾ.ದಂ. ಚಿಂಚೋಳಿ**